ಅ) ಇವುಗಳಿಗೆ ಖರ್ಚಾಗಿರುವ ಹಣವೆಷ್ಟು?

ಇ) ಇವುಗಳಲ್ಲಿ ಕಟ್ಟುತ್ತಿರುವ ವಿವಿಧ ಹಂತದಲ್ಲಿರುವ ಮನೆಗಳು ಎಷ್ಟು?

ಈ) ಇವುಗಳಿಗೆ ಬಿಡುಗಡೆ ಮಾಡಬೇಕಾಗಿರುವ ಹಣ ಎಷ್ಟು?

ಶ್ರೀ ಗೋಪಿನಾಥ್ ಸಾಂಡ್ರಾ (ವಸತಿ ಸಚಿವರು) :

ಅ) 1994ರ ಜುಲೈ ಅಂತ್ಯದ ವೇಳೆಗೆ ಆಶ್ರಯ ಯೋಜನೆಯಡಿ 47936 ಮನೆಗಳ ಹಾಗೂ ಡಾ: ಅಂಬೇಡ್ಕರ್ ಯೋಜನೆಯಡಿ 18456 ಮನೆಗಳ ನಿರ್ಮಾಣ ಪೂರ್ಣಗೊಂಡಿರುತ್ತದೆ.

ಆ) ಆಶ್ರಯ ಯೋಜನೆಯಡಿ ರೂ. 8707.07 ಲಕ್ಷಗಳು ಹಾಗೂ ಡಾ॥ ಅಂಬೇಡ್ಕರ್ ಯೋಜನೆಯಡಿ ರೂ. 3034.26 ಲಕ್ಷ ಮೇಲ್ಕಂಡ ಸಂಖ್ಯೆಯ ಮನೆಗಳಿಗೆ ಖರ್ಚಾಗಿರುತ್ತದೆ.

ಇ)

ಆಶ್ರಯ	ಅಂಬೇಡ್ಕರ್
24737	6967

ಈ) ಆಶ್ರಯ ಯೋಜನೆಯಡಿ ಜಿಲ್ಲಾಧಿಕಾರಿಗಳಿಗೆ ಬೇಕಾದ ಹಣವನ್ನು ಸಂಪೂರ್ಣವಾಗಿ ಸರ್ಕಾರ ಬಿಡುಗಡೆ ಮಾಡಿದೆ.

ಡಾ॥ ಅಂಬೇಡ್ಕರ್ ಮನೆಗಳಿಗೆ ಒಟ್ಟು ಬಿಡುಗಡೆ ಮಾಡಬೇಕಾದ ಹಣ ರೂ. 4920.00 ಲಕ್ಷ

ಈಗಾಗಲೇ ಬಿಡುಗಡೆ ಮಾಡಲಾಗಿರುವುದು 3872.00

ಗೃಹ ಮಂಡಳಿಯ ಬಿಡುಗಡೆ ಮಾಡಬೇಕಾದ ಹಣ ರೂ. 1047.70 ಲಕ್ಷ

ರಾಜ್ಯದಲ್ಲಿ ಕಂದಾಯ ಭೂಮಿಯ ರೀ-ಸರ್ವೆ

316 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕಂದಾಯ ಭೂಮಿಯ ರೀ ಸರ್ವೇ ಕೆಲಸ ನಡೆದು ಸುಮಾರು ಎಷ್ಟು ವರ್ಷಗಳಾಗಿವೆ;

ಆ) ರೀ - ಸರ್ವೇ ಮಾಡಿಸದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಸುಮಾರು 77 ವರ್ಷಗಳಾಗಿವೆ.

ಆ) ರೀ-ಸರ್ವೆ ಕಾರ್ಯಕ್ಕೆ ಬಹಳಷ್ಟು ಹಣ ಅಂದರೆ ರೂ. 717.00 ಕೋಟಿ ಬೇಕಾಗುತ್ತದೆ. ರೀ-ಸರ್ವೆ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಹೆದ್ದಾರಿಗಳಲ್ಲಿ ಸಾರ್ವಜನಿಕ ಸ್ಥಳದ ಒತ್ತುವರಿ ಬಗ್ಗೆ

316 ಎ - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆದ್ದಾರಿಗಳಿಂದ ಹಿಡಿದು ದಾರ ಖರಾಬು, ಕೆರೆ ಅಂಗಳ ಹಾಗೂ ಹಳ್ಳಿಗಳನ್ನು ಒತ್ತುವರಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;